

# ಬಡವರ ಮಕ್ಕಳಿಗೂ ಹೆಣ್ಣು ಸಿಗಲಿ

**‘ಅನ್ಯಾಯಕಾರಿ ಬ್ರಹ್ಮ’ ಗೀತೆಯ ಹಾಡುಗಾರ ಮಳವಳ್ಳಿ ಮಹದೇವಸ್ವಾಮಿ ಸಂದರ್ಶನ**

■ ಎಂ.ಎನ್. ಯೋಗೇಶ್

◆ **‘ಅನ್ಯಾಯಕಾರಿ ಬ್ರಹ್ಮ’ ಜನಪದ ಗೀತೆ ಜನರ ‘ಹಾಟ್ ಫೇವರeಟ್’ ಆಗಿಬಿಟ್ಟಿದೆ. ಈ ಗೀತೆಯ ಹಿನ್ನೆಲೆ ಏನು?**

‘ಅರ್ಜುನನ ಜೋಗಿ ಹಾಡು’ ಜನಪದ ಕಾವ್ಯದಲ್ಲಿ ಬರುವ ಸಾಲುಗಳಿವು. ಅತೀ ಸುಂದರನಾಗಿದ್ದ ಅರ್ಜುನನು ಜೋಗಿಯಾಗಿ ಬೀದಿಯಲ್ಲಿ ಅಲೆಯುವಾಗ ಹೆಣ್ಣುಮಕ್ಕಳು ವ್ಯಕ್ತಪಡಿಸುವ ಭಾವನೆಗಳಿವು. ಪತ್ನಿ ದ್ರೌಪದಿ ಜೊತೆ ಪಗಡೆಯಾಟದಲ್ಲಿ ಸೋತ ಅರ್ಜುನ, ಜೋಗಿಯ ವೇಷ ಧರಿಸಿ ಜೋಳಿಗೆ ಹಿಡಿದು, 12 ವರ್ಷ ದೇಶಾಂತರಕ್ಕೆ ತೆರಳುತ್ತಾನೆ. ಮಾರುವೇಷದಲ್ಲಿರುವ ಅರ್ಜುನನ ಸೌಂದರ್ಯ ಕಂಡು ಮಾರುಹೋಗುವ ಯುವತಿಯರು, ‘ಅನ್ಯಾಯಕಾರಿ ಬ್ರಹ್ಮ, ಈ ಸುಂದರನ ಸನ್ಯಾಸಿ ಮಾಡಬಹುದೇ’ ಎಂದು ಬೇಸರಪಟ್ಟುಕೊಳ್ಳುತ್ತಾರೆ. ಹುಣಸೂರು ಕೃಷ್ಣಮೂರ್ತಿ ಅವರ ‘ಬಬ್ರುವಾಹನ’ ಚಿತ್ರದಲ್ಲಿ ಅರ್ಜುನ ತೀರ್ಥಯಾತ್ರೆಗೆ ಹೋಗುವಾಗಲೂ ಈ ಪ್ರಸ್ತಾಪವಿದೆ. ಅದೇ ರೀತಿ ಜನಪದದಲ್ಲಿ ಅರ್ಜುನ ಜೋಗಿಯಾಗಿ ದೇಶಾಂತರ ತೆರಳುವಾಗ ನಡೆಯುವ ಪ್ರಸಂಗವಿದು.

◆ **‘ಅರ್ಜುನನ ಜೋಗಿ ಹಾಡು’ ಕಥನಗೀತವನ್ನು ನೀವು ಹಾಡಿದ್ದು ಯಾವಾಗ?**

1995ರಲ್ಲಿ ಬೆಂಗಳೂರಿನ ಪರೇಖ್ ಸ್ಟುಡಿಯೊದಲ್ಲಿ ರೆಕಾರ್ಡಿಂಗ್ ನಡೆಯಿತು. ಆರಂಭದಲ್ಲಿ ನಾನು ಈ ಕಥನದ ಒಂದು ಸಾವಿರ ಧ್ವನಿಸುರುಳಿಗಳನ್ನು ಮಾಡಿಸಿದ್ದೆ. ಚಿಕ್ಕಲೂರು ಜಾತ್ರೆಯಲ್ಲಿ ಅತೀ ಹೆಚ್ಚು ಕ್ಯಾಸೆಟ್‌ಗಳು ಮಾರಾಟವಾಗಿದ್ದವು. ನಂತರ ಸಿ.ಡಿ.ಯನ್ನೂ ಮಾಡಿಸಿದೆ. ಸಿ.ಡಿ.ಗಳೂ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾದವು. ಈಗಲೂ ನನ್ನ ಬಳಿ ಆ ಸಿ.ಡಿ. ಇದೆ. ವಿಡಿಯೊ ಚಿತ್ರೀಕರಣ ಮಾಡುವ ಮನಸ್ಸಿತ್ತು. ಆದರೆ ಅದಕ್ಕೆ ಬೇಕಾದ ಹಣ ಇರಲಿಲ್ಲ.

◆ **‘ಅನ್ಯಾಯಕಾರಿ ಬ್ರಹ್ಮ’ ಹಾಡು ಮುಂದೊಂದು ದಿನ ಜನರ ಮನಸೂರೆಗೊಳ್ಳುತ್ತದೆ ಎಂದು ಭಾವಿಸಿದ್ದಿರಾ?**

ನಾನು ಖಂಡಿತಾ ಎಣಿಸಿರಲಿಲ್ಲ. ನಾನು ಹಲವು ಕಥೆಗಳನ್ನು ಹಾಡಿದ್ದೇನೆ. ಅದರಂತೆ ಅರ್ಜುನನ ಜೋಗಿ ಕಥೆಯನ್ನೂ ಹಾಡಿದ್ದೇನೆ. ಅದು ಈ ರೂಪ ಪಡೆದುಕೊಳ್ಳುತ್ತದೆ ಎಂದುಕೊಂಡಿರಲಿಲ್ಲ. ಜನಪದ ಗೀತೆಗಳು, ಕಥೆಗಳು ಸಾಯುತ್ತಿವೆ ಎನ್ನುವ ಹೊತ್ತಿನಲ್ಲಿ ನಮ್ಮ ಜನರಿಗೆ ಈ ಗೀತೆ ಇಷ್ಟು ಇಷ್ಟವಾಯಿತಲ್ಲ ಎನ್ನುವುದೇ ದೊಡ್ಡ ಖುಷಿ.

◆ **‘ಅನ್ಯಾಯಕಾರಿ’ ಗೀತೆಯನ್ನು ಬಳಸಿಕೊಂಡು ಜಾಲತಾಣಗಳಲ್ಲಿ ನಡೆಯುತ್ತಿರುವ ‘ರೀಲ್ಸ್’ ಬಗ್ಗೆ ಏನನ್ನಿಸುತ್ತದೆ?**

ಇವತ್ತಿನ ಕಾಲದಲ್ಲಿ ರೈತರ ಮಕ್ಕಳಿಗೆ, ಕೂಲಿ ಕಾರ್ಮಿಕರ ಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ. ಸರ್ಕಾರಿ ಕೆಲಸವೇ ಬೇಕು ಎಂದು ಹೆಣ್ಣು ಮಕ್ಕಳು ಕೇಳುತ್ತಿದ್ದಾರೆ. ಮದುವೆಯಾಗದ ಹುಡುಗರ ಸಂಖ್ಯೆ ಜಾಸ್ತಿಯಾಗಿದೆ. ಸುಂದರ ಗಂಡು ಮಕ್ಕಳಿಗೂ ಹೆಣ್ಣು ಸಿಗುತ್ತಿಲ್ಲ. ಅರ್ಜುನನ ಜೋಗಿ ಹಾಡು ಈ ಸಂದರ್ಭಕ್ಕೆ ಸರಿ ಹೊಂದುತ್ತದೆ.